ಶ್ರೀ ಎಸ್ ಆರ್. ನಾಗಪ್ಪಶೆಟ್ಟಿ.—ಕೆರೆಯಕೋಡಿ ನಾಲೆಯನ್ನು ತಗ್ಗಿಸಿದಮೇಲೆ, ಆ ಕೆರಗೆ catchment area ಚೆನ್ನಾಗಿದ್ದರೂ ಯಾವಾಗಲೂ ನೀರು ಬಾರದಿರುವ ಸಂದರ್ಭದಲ್ಲಿ assured water supply ಮಾಡಿದೆಯೆಂದು ಹೇಳಿ ರೆಮಿಷ್ಷ್ ಕೊಡದಿರುವುದು ಸರಿಯೇ ?

ಶ್ರೀ ಕಡಿದಾಳ್ ಮಂಜಪ್ಪ.—ರೆಮಿಷ್ಷ್ ಕೊಡುವುದರಿಂದಲೇ assured water supply ಆಗುತ್ತದೆಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಗೌಡನ ಕೆರೆಗೆ ನೀರಿಗೆ ಹಳ್ಳದಿಂದ ಬರುವುದು 30-40 ಕ್ಯೂಸೆಕ್ಕುಗಳು. ಅಂಥದರಲ್ಲಿ ಈಗ ಅಲ್ಲಿಂದ ಸವಳಂಗದ ಕೆರೆಗೆ 3,000—4,000 ಕ್ಯೂಸೆಕ್ಕುಗಳು ಹರಿದು ಹೋಗುತ್ತಿದೆ. ಹೀಗಿರುವಾಗ assured water supply ಇದೆಯೆಂದು ಹೇಳಿ ಟ್ಯಾಕ್ಸ್ ಹಾಕುವುದು ಸರಿಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಪ್ರಯೋಜನವಾಗುತ್ತದೆಂದು ಮನದಟ್ಟಾಗಿಯೇ ಮುಚ್ಚಳಿಕೆ ಬರೆದು ಕೊಟ್ಟಿದ್ದಾರೆ. ಅದರಂತೆ ಟ್ಯಾಕ್ಸ್ ಹಾಕುತ್ತಿದ್ದೇವೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಈಗ ಗೌಡನ ಕೆರೆಯಿಂದ ಮುಂದಕ್ಕೆ ಹೋಗುವ ನಾಲೆಯಲ್ಲಿ ಎಲ್ಲಿಯವರೆಗೆ ನೀರು ಕೊಡುತ್ತೀರೋ ಅಲ್ಲಿಯವರೆಗೆ ಮಾತ್ರ water rate ವಿಧಿಸುವುದು ನ್ಯಾಯವಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಗೌಡನ ಕೆರೆಯ ನಂತರ ಅದರ ಕೆಳಗೂ ಕೆರೆಗಳಿವೆ. ಆ ಕೆರೆಗಳಿಗೆಲ್ಲಾ assured water supply ಇದೆಯೆಂದು ಹೇಳುತ್ತಿದ್ದಾರೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಪಾಸ್ತವವಾಗಿ ಅನೇಕರಿಗೆ ಅನ್ಯಾಯವಾಗುತ್ತಿರುವುದನ್ನು ವಿಚಾರ ಮಾಡಿಸಿ ಮತ್ತು ಈ ಪ್ರಾಜೆಕ್ಟಿನಲ್ಲಿ ಯಾರು ಯಾರು ಕೆಲಸಮಾಡಿದ್ದಾರೋ ಅವರು ಎಷ್ಟರಮಟ್ಟಿಗೆ ದುರ್ವಿನಿಯೋಗ ಮಾಡಿದ್ದಾರೆಂಬುದನ್ನು ಎಕ್ಸ್‌ಕ್ಯೈರಿ ಹಣವನ್ನು ಮಾಡಿಸಿ ರೈತರಿಗೆ ಅನುಕೂಲಮಾಡಿಕೊಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—1945ನೆಯ ಇಸವಿಯಲ್ಲಿ work ಪ್ರಾರಂಭವಾಗಿ ಮುಗಿದಿದೆ. ಈಗ ಎಕ್ಸ್‌ಕ್ಯೈರಿ ಮಾಡುವುದರಿಂದ ಏನೂ ಫಲತಾಂಶವಿರುವುದಿಲ್ಲ. ರೈತರಿಗೆ ತೊಂದರೆಯಾಗುತ್ತಿದ್ದರೆ ವಿಚಾರಮಾಡೋಣ. ಇನ್ನೊಂದುಸಾರಿ ಶಿವಮೊಗ್ಗಕ್ಕೆ ಹೋದಾಗ ನೋಡೋಣ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ತಮ್ಮ original plan ಪ್ರಕಾರ ಎಡಗಡೆ ನಾಲೆಯನ್ನೂ ಮಾಡಬೇಕೆಂದಿದೆ. ಅದನ್ನೂ ಪರಿಶೀಲನೆ ಮಾಡುತ್ತೀರಾ ?

(ಉತ್ತರವಿಲ್ಲ.)

Road works at Nelahalu and Champehalli.

(Compensation for lands acquired.)

Q.—471. Sri B. C. NANJUNDIAH (Kora).—

Will the Government be pleased to tate :—

(*a*) when the work of the roads of Nelahalu, Tumkur taluk, and Champehalli of Koratagere taluk was commenced ;

(*b*) the department which formed this road ;

(*c*) whether the acquisition proceedings in respect of lands in this connection have been completed ;

(*d*) if so, the amount granted for the acquisition and the department which paid this amount ;

(*e*) if the acquisition proceedings are not completed, the reason therefor ?

A.—Sri T. CHANNIAH (Minister for Public Health and Local Self-Government).—

(*a*) In 1933-34.

(*b*) Public Works Department.

(*c*) The acquisition has been sanctioned.

(*d*) About Rs. 4,800 has been sanctioned, to be paid by the Local Self-Government Department.

(*e*) Does not arise ; *vide* reply to clause (*c*).

ಶ್ರೀ ಬಿ. ಸಿ. ನಂಜುಂಡಯ್ಯ.—Acquisition has been sanctioned ಎಂದು ಹೇಳಿದ್ದೀರಿ. ಯಾವಾಗ sanction ಆಯಿತು ?

ಶ್ರೀ ಟಿ. ಚನ್ನಯ್ಯ.—23ನೇ ಮಾರ್ಚ್ 1955ರಲ್ಲಿ.

ಶ್ರೀ ಬಿ. ಸಿ. ನಂಜುಂಡಯ್ಯ.—ಈ interpellation ಕಳುಹಿಸಿದಮೇಲೆ sanction ಆಯಿತೆಂದು ತಿಳಿದುಕೊಳ್ಳೋಣವೇ ?

ಶ್ರೀ ಟಿ. ಚನ್ನಯ್ಯ.—ಹಾಗೆಯೇ ತಿಳಿದುಕೊಳ್ಳಬಹುದು.

ಶ್ರೀ ಬಿ. ಸಿ. ನಂಜುಂಡಯ್ಯ.—ಈ ರಸ್ತೆ form ಆಗಿ 25 ವರ್ಷವಾಯಿತು. ಹಾಗಿದ್ದರೂ ಆ ಜಮೀನಿನ ಮೇಲೆ ಕಾಂಪೆನ್‌ಸೇಷ್ಷ್ ಕೊಡುವುದು ಹೋಗಲಿ, ಕಂದಾಯವನ್ನು 25 ವರ್ಷದಿಂದ ಹಾಕಿ ವಸೂಲು ಮಾಡುತ್ತಿದ್ದಾರೆಂಬುದು ಗೊತ್ತಿದೆಯೇ ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಬಿ. ಸಿ. ನಂಜುಂಡಯ್ಯ.—ಈ ಕೆಲಸವನ್ನು Public Works Departmentನವರು ಮಾಡುತ್ತಾರೆಂದು ಹೇಳಿದ್ದೀರಿ ; (ಡಿ) ಪ್ರಶ್ನೆಗೆ ಉತ್ತರದಲ್ಲಿ "About Rs. 4,800 has be sanctioned, to be paid by the Local Self-Government Department" ಎಂದು ಹೇಳಿದ್ದೀರಿ. Local Self-Government ನಿಂದ ಕೊಡುವುದಾದರೆ ಅವರು ಯಾವ ಹೆಡ್‌ನಿಂದ ಕೊಡುತ್ತಾರೆ ?

Sri T. CHANNIAH.—From Land Revenue assignments.